ಇದೇ ರೀತಿಯ ತರಬೇತಿ ಪಡೆದ ಓದುಗ ವಲಯ ಇದ್ದದ್ದರಿಂದ ಅದು ಜನಪ್ರಿಯವಾಯಿತು. ಬರೆಯುವವರು ಓದುಗರು ಇಬ್ಬರೂ ಒಂದೇ ರೀತಿಯಿದ್ದದ್ದರಿಂದ ಅದು ಜನಪ್ರಿಯವಾಯಿತು. ಇದು ಗಂಡುಕಣ್ಣಿಗೆ ಒಪ್ಪಿತವಾಗಲಿಲ್ಲ ಅಷ್ಟೇ.

◆ **ನಮ್ಮ ಜನಪ್ರಿಯ ಧಾರಾವಾಹಿಗಳಲ್ಲಿನ ಹೆಣ್ಣಿನ ಚಿತ್ರಣ...**

ಇದು ಪಿತೃಪ್ರಧಾನ ವ್ಯವಸ್ಥೆಯ ರಾಜಕಾರಣ. ನೀವು ಎರಡು ಹೆಜ್ಜೆ ಮುಂದಕ್ಕೆ ಹೋದರೆ ನಿಮ್ಮನ್ನು ನಾಲ್ಕು ಹೆಜ್ಜೆ ಹಿಂದಕ್ಕೆ ಎಳೆಯೋದು ಇಲ್ಲಿ ನಡೀತಿರೋದು. ಇಡೀ ವ್ಯವಸ್ಥೆಯೇ ಈ ಪಿತೃಪ್ರಧಾನ ಮೌಲ್ಯವ್ಯವಸ್ಥೆಯ ತರಬೇತಿ ಪಡೆದಿರುವುದರಿಂದ ಅವು ಸೃಷ್ಟಿಸೋ ಪಾತ್ರಗಳು ಅದೇ ರೀತಿ ಇರುತ್ತೆ. ಆಧುನಿಕ ಸ್ತ್ರೀಯರು, ಸ್ತ್ರೀವಾದಿಗಳು ಅಂದರೆ ಎಲ್ಲ ರೀತಿಯ ನೇತ್ಯಾತ್ಮಕ ಗುಣಗಳನ್ನು ಹೊಂದಿರುವವರು ಅಂತ ತೋರಿಸೋದು. ಈಗೀಗ ಹೆಣ್ಣುಮಕ್ಕಳು ಮಾತಾಡಲು ಶುರುಮಾಡಿದಾರೆ. ಅವರನ್ನು ಕಟ್ಟಿಹಾಕಲು ಬೇಕಾದ ತಂತ್ರಗಳನ್ನು ಹೆಣೆದುಬಿಡುವುದು. ಸಮೂಹ ಮಾಧ್ಯಮಗಳು ಇದನ್ನೇ ಮಾಡ್ತಿವೆ. ಕುಟುಂಬದ ಅನುಕೂಲಕ್ಕಾಗಿ ದುಡಿಯಲು ಮನೆಯಿಂದ ಹೊರಗೆ ಹೋಗುವುದು ಅನಿವಾರ್ಯವಾಯಿತು. ಹೊರಗೆ ಅಡಿ ಇಟ್ಟ ಹೆಣ್ಣು ಲೋಕ ನೋಡಿರೋದರಿಂದ ಅವಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವುದು ಸುಲಭವಲ್ಲ. ಹಾಗಾಗಿ ಈ ಧಾರಾವಾಹಿಗಳು ಪಿತೃಪ್ರಧಾನ ವ್ಯವಸ್ಥೆಯ ಮೌಲ್ಯಗಳನ್ನು ಪುನರ್‌ಸ್ಥಾಪಿಸುತ್ತಿವೆ. ಯಾವ ಮೌಲ್ಯಗಳನ್ನು ನಂಬಬೇಕು ಅನ್ನೋದನ್ನ ನಿರ್ದೇಶಿಸುತ್ತಿವೆ. ಅವರು ಹೇಳ್ತಿರೋ ಮೌಲ್ಯಗಳನ್ನು ದಾಟಿ ಹೊರಗೆ ಕಾಲಿಡಬೇಡ ಅಂತಲೇ ಅವು ಹೇಳ್ತಾ ಇರೋದು. ಪ್ರವಚನ ಕಾಲದಲ್ಲೂ ಇದೇ ಆಗ್ತಿತ್ತು. ಈಗ ಧಾರಾವಾಹಿಗಳು ಅದನ್ನೇ ಹೇಳ್ತಾ ಇವೆ. ಹಬ್ಬಗಳು ಅಂದಾಗ ಗಂಡನ ಪೂಜೆಯೇ ಯಾಕೆ ಆಗಬೇಕು? ತತ್ತ್ವಶಾಸ್ತ್ರ, ಪುರಾಣ, ಧರ್ಮದ ಹೊಸ ಸ್ವರೂಪ ಸಾಹಿತ್ಯ ಮತ್ತು ಮಾಧ್ಯಮಗಳು. ಸಾಹಿತ್ಯ, ಕಲೆ, ಸೃಜನಶೀಲತೆಗಳೆಲ್ಲವೂ ಈ ಪಿತೃಪ್ರಧಾನತೆಯ ತಂತ್ರಗಾರಿಕೆ ಮತ್ತು ಮೌಲ್ಯಗಳಿಗೆ ಹೊರತಾದದ್ದಲ್ಲ.

